


### ವಾಸ್ತವಕ್ಕೆ ಹಿಡಿದ ಕನ್ನಡಿ

'ನನಗೂ ಸಂಗಾತಿ ಬೇಕು' ( ನ. 13 , ರಾಹುಲ ಬೆಳಗಲಿ) ಮುಖಪುಟ ಲೇಖನ ವಾಸ್ತವಕ್ಕೆ ಹಿಡಿದ ಕನ್ನಡಿ. ಇದು ಏಕೆ? ಹೇಗೆ? ಪರಿಹಾರವಿಲ್ಲವೇ? ಎಂಬುದೆಲ್ಲ ಒಂದು ಕಡೆಯಾದರೆ, ಪ್ರಕೃತಿಯ ಮೇಲೆ ಇದರಿಂದಾಗುವ ಅಡ್ಡ ಪರಿಣಾಮಗಳನ್ನು ನೆನೆದರೆ ಭಯವಾಗುತ್ತದೆ. ನಾಲ್ಕೈದು ದಶಕಗಳ ಹಿಂದೆ ಸರಾಸರಿಯಲ್ಲಿ 25ಕ್ಕೆ ಅಪ್ಪ ಅಮ್ಮ, 50ಕ್ಕೆ ಅಜ್ಜಿ ತಾತ ಎನ್ನುವುದಿತ್ತು. ಈಗ 40 ದಾಟಿ 50ರ ಸಮೀಪ ಬಂದರೂ ಸಂಗಾತಿ ಸಿಗದ ಯೋಗ್ಯ ಗಂಡುಮಕ್ಕಳನ್ನು ನೋಡಿದಾಗ ಮರುಕವೆನಿಸುವುದಂತೂ ನಿಜ. ಇಂಥ ಗಂಭೀರ ಸಮಸ್ಯೆಯನ್ನು ಹೆಣ್ಣು ಹೆತ್ತವರೂ ಸಾವಕಾಶವಾಗಿ ವಿಶ್ಲೇಷಿಸಬೇಕು.

—ಕೆ.ವಿ. ರಾಜಲಕ್ಷ್ಮಿ, ಬೆಂಗಳೂರು

### ಪೂರ್ವಗ್ರಹ ಪೀಡಿತ ಅಭಿಪ್ರಾಯ

ಲೇಖನದಲ್ಲಿ ಹೆಣ್ಣಿನ ಬಗ್ಗೆ ಪೂರ್ವಗ್ರಹ ತುಂಬಿದ ಆರೋಪ ಮಾಡಲಾಗಿದೆಯೇ ಹೊರತು, ಸಮಸ್ಯೆಯ ಮೂಲ ಕಾರಣಗಳ ಬಗ್ಗೆ, ವಾಸ್ತವಾಂಶಗಳ ಬಗ್ಗೆ ಹುಡುಕಾಟ, ಚರ್ಚೆ ಕಾಣಲಿಲ್ಲ. '...ಮನೆ ಅಳಿಯನನ್ನಾಗಿಸುವ...' ಪೂರ್ವಗ್ರಹದ ಮಾತಿನ ಕೊನೆಯಲ್ಲಿ, 'ವಿಶೇಷವೆಂದರೆ ಆಸ್ತಿ ದಾಖಲೆಪತ್ರಗಳು ಎಲ್ಲವೂ ಮಗಳ ಹೆಸರಿನಲ್ಲೇ ಇರುತ್ತದೆ ಹೊರತು ಮನೆ ಅಳಿಯನ ಹೆಸರಲ್ಲಿ ನೋಂದಣಿ ಆಗುವುದಿಲ್ಲ' ಎನ್ನುವುದು ಕೂಡ ಅವರ ತರ್ಕದ ಅಪಕ್ವತೆಯನ್ನೇ ಹೇಳುತ್ತದೆ. 'ಮನೆ ಸೊಸೆ'ಯಾಗಿ ಬದುಕುವ/ಬದುಕುತ್ತಿರುವ ಅಸಂಖ್ಯಾತ ಸೊಸೆಯರ ಹೆಸರಿಗೆ ಗಂಡನ ಮನೆ ಆಸ್ತಿ ದಾಖಲೆಗಳನ್ನು ನೋಂದಾವಣೆ ಮಾಡಿಕೊಡುತ್ತಿದ್ದಾರಾ? (ಹಾಗೆ ಮಾಡಬೇಕೆನ್ನುವುದು ನನ್ನ ಅಭಿಪ್ರಾಯ ಅಲ್ಲ) ಈ ಲೇಖನದಲ್ಲಿನ ಪೂರ್ವಗ್ರಹ ಪೀಡಿತ ಮಾತುಗಳಿಗೆ ಉತ್ತರವೆಂಬಂತೆ/ಸವಾಲಿನಂತೆ 'ನಿಮ್ಮೊಡನೆ' ಮತ್ತು ಸುಷ್ಮ ಸಿಂಧು ಅವರ 'ಮಹಿಳೆಯರು ಮಾನಸಿಕ ಸ್ಥಿಮಿತ ಸಾಧಿಸುವುದು ಹೇಗೆ?' ಎಂಬ ಲೇಖನಗಳೂ ಪ್ರಕಟವಾಗಿರುವುದು ಈ ಸಂಚಿಕೆಯ ವಿಶೇಷ!

—ಎಲ್.ಟಿ. ಸರಸ್ವತಿ, ಸಾಗರ

### ಪರಿಹಾರ ಎಲ್ಲಿದೆ?

ಜ್ವಲಂತ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿದ ಲೇಖನ. ಮದುವೆ ಎಂಬುದು ಒಂದು ಸಾಮಾಜಿಕ ವ್ಯವಸ್ಥೆ. ಆದರೆ ಅದು ಕನ್ಯೆ ಸಿಗದಿರುವ ಇಂದಿನ ಸಮಸ್ಯೆಯಿಂದಾಗಿ ತುಂಬ ಜಟಿಲವಾಗುತ್ತಿದೆ. ಅದಕ್ಕೆ ಕಾರಣ ಜಾಗತೀಕರಣ. ಇದರ ನೇರ ಪ್ರಭಾವದಿಂದ ಮುಖ್ಯವಾಗಿ ನಮ್ಮ ರೈತಾಪಿ ಬದುಕು ಸಂಕಷ್ಟಕ್ಕೆ ಸಿಲುಕಿದೆ. ರೈತರೇ ಬಹು ಸಂಖ್ಯಾತರಾಗಿದ್ದರಿಂದ ಅಂತಹ ಸಂಕಷ್ಟದ ಮನೆಗೆ ಸೊಸೆಯಾಗಿ ಹೋಗಲು ರೈತರ ಮಕ್ಕಳೇ (ಹೆಣ್ಣುಮಗಳು) ತಯಾರಿಲ್ಲ. ಈ ಕಾರಣವನ್ನು ಅರಿತು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

### ಕಾಲ ಬದಲಾಗಿದೆ

ವಿದ್ಯಮಾನಕ್ಕೆ ಕನ್ನಡಿಯಂಥ ಲೇಖನ. ಹಿಂದೆ ಹೆಣ್ಣಿಗೆ ಗಂಡು ಹುಡುಕುವ ಕಷ್ಟದಂತೆ ಈಗ ಗಂಡಿಗೆ ಹೆಣ್ಣು ಹುಡುಕುವ ಕಷ್ಟ! ಇತಿಹಾಸದ ಪುನರಾವರ್ತನೆ, ಆದರೆ ವಿರುದ್ಧ ಗತಿಯಲ್ಲಿ! ಅಂದು ಮೀಸೆ ಹೊತ್ತ ಗಂಡಿಗೆ ಡಿಮಾಂಡ್. ಈಗ ಅವರಿಗೆ ರಿಮಾಂಡ್! 'ವಧು–ವರ' ಪದಗಳು ಮಾಯವಾಗಿ 'ಸಂಗಾತಿ' ಎಂಬುದು ಬದಲಾದ ವಿದ್ಯಮಾನದ ಸೂಚನೆ. ಪುರುಷ ಪ್ರಧಾನ ಸಮಾಜದ ಮನಸ್ಥಿತಿಗೆ ಪುರುಷರೇ 'ಬೆಲೆ' ತೆರುವಂತಾದುದು ಕ್ರೂರ ಸತ್ಯ! ಕಾಲವೇ ಇದಕ್ಕೊಂದು ಪರಿಹಾರ ಕಂಡುಕೊಳ್ಳುವುದು. ಅಂತರ್ಜಾತೀಯ ವಿವಾಹಗಳು ಇದಕ್ಕೊಂದು ಪರಿಹಾರ ಆಗಲೂಬಹುದು. ಜಾತಿಯ ಗಡಿ ಮೀರಿ ಪ್ರೀತಿಯ ಜೊತೆಗೆ ಬಾಳು ಬೆಳಗಲಿ. ಹೇಗಾದರೂ ಜಾತಿ ಎಂಬ ಭೂತ ನಿವಾರಣೆ ಆಗಲಿ!

—ವಾಸಣ್ಣ, ಧಾರವಾಡ

### ಉತ್ತಮ ಸಂದೇಶ ನೀಡಿದ ಕಥೆ

'ಸಾವು ಮತ್ತು ನಿದ್ದೆ' (ನ. 13, ಮಲ್ಲಿಕಾರ್ಜುನ ಹೊಸಪಾಳ್ಯ) ಉತ್ತಮ ಸಂದೇಶ ನೀಡಿರುವ ಕಥೆ. ಪದ್ದಕ್ಕನೊಂದಿಗೆ ಹಸನಾದ ಬಾಳು ನಡೆಸಬೇಕಿದ್ದ ಮೂರ್ತಿ, ಬೈಕ್‌ನೊಂದಿಗೆ ರೀಲ್ಸ್ ಮಾಡುವ ಹುಚ್ಚು ಸಾಹಸದಿಂದ ತನ್ನ ಬದುಕನ್ನು ಬರಡಾಗಿಸಿಕೊಂಡಿದ್ದಲ್ಲದೆ ಪದ್ದು ಬದುಕನ್ನೂ ಅಂಧಕಾರಕ್ಕೆ ತಳ್ಳಿದ. ಇಂದಿನ ಅದೆಷ್ಟೋ ಯುವಕ ಯುವತಿಯರು ಸಮುದ್ರ ತಡಿಯಲ್ಲಿ, ರೈಲ್ವೆ ಹಳಿಯಲ್ಲಿ, ಜಲಪಾತದ ಕಣಿವೆಯಲ್ಲಿ, ಎಲ್ಲೆಂದರಲ್ಲಿ ರೀಲ್ಸ್ ಮಾಡಲು ಹೋಗಿ ಅವಘಡಕ್ಕೆ ಸಿಲುಕಿ ಅಮೂಲ್ಯ ಜೀವವನ್ನೇ ಕಳಕೊಂಡು ತಮ್ಮವರನ್ನು ದುಃಖದ ಮಡುವಿಗೆ ತಳ್ಳುತ್ತಿದ್ದಾರೆ. ಕಥೆಯ ಸಂದೇಶ ಇಂತಹ ಜನರನ್ನು ತಲುಪಲಿ. ಅಂತೂ ಕೊನೆಗೆ ಸಾವು ಮೂರ್ತಿಯನ್ನು ಚಿರನಿದ್ದೆಗೆ ಒಯ್ದಿತ್ತು. ಗಾಢ 'ನಿದ್ದೆ' ಪತಿಯ ಮರಣದ ಸುಳಿವೂ ನೀಡದಂತೆ ಪದ್ದಕ್ಕನಿಗೆ ತಾತ್ಕಾಲಿಕ ಸಾಂತ್ವನ ನೀಡಿತ್ತು.



—ದಯಾನಂದ ಶೆಟ್ಟಿ, ಕಾರ್ಕಳ

### ಸಮಾಜ ಬದಲಾಗಬೇಕು

'ಮುಟ್ಟೆಂಬ ಜೀವಶಕ್ತಿ' (ನ. 13, ಮೀನಾಕ್ಷಿ ಬಾಳಿ) 'ವಿಚಾರ ಲಹರಿ' ಅರ್ಥಗರ್ಭಿತವಾಗಿದೆ. ಲೇಖಕಿ ಹೇಳಿದಂತೆ ಪುರುಷರು ಸಂವೇದನಾಶೀಲರಾದರೆ ಅದೊಂದು ಉತ್ತಮ ಬೆಳವಣಿಗೆ. ಇಂತಹ ವಿಚಾರಗಳಲ್ಲಿ ಅಲ್ಲಮಪ್ರಭು, ಕಡಕೋಳ ಮಡಿವಾಳಪ್ಪನವರು ಹಾಗೂ ಸರ್ವಜ್ಞರ ಮಾತುಗಳು ನಮಗೆ ದಾರಿದೀಪ, ಮಾರ್ಗದರ್ಶಿ.

ಇದೇ ಸಂಚಿಕೆಯಲ್ಲಿ ಮೂಡಿಬಂದ 'ಮಹಿಳೆಯರು ಮಾನಸಿಕ ಸ್ಥಿಮಿತ ಸಾಧಿಸುವುದು ಹೇಗೆ?' (ಸುಷ್ಮ ಸಿಂಧು) ಲೇಖನ ಬಹಳ ಚೆನ್ನಾಗಿದೆ. ಹಲವಾರು ವಿಷಯಗಳ ಕಾರಣದಿಂದ ಸಮಾಜವೇ ಮುಖ್ಯವಾಗಿ ಮಹಿಳೆಯರ ಮಾನಸಿಕ ಸ್ವಾಸ್ಥ್ಯವನ್ನು ಕದಡುತ್ತಿರುವುದು ವಿಷಾದಕರ. ಈ ವಿಚಾರದಲ್ಲಿ ಸಮಾಜ ಬದಲಾಗಬೇಕಿದೆ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

### ಇದೆಂಥ ಮನರಂಜನೆ?


'ಪಕ್ಷಿಗಳ ಪ್ರಾಣ ತೆಗೆದ ಪಟಾಕಿ' (ನ. 13, ಮಹೇಶ್ವರ ಹುರುಕಡ್ಲಿ) 'ನಿಮ್ಮ ಪುಟ'ದಲ್ಲಿನ ಈ ಬರಹ ಓದಿ ಮನಸ್ಸು ಭಾರವಾಯಿತು. ಮೂಕ ಜೀವಿಗಳ ಮೇಲೆ ಮಾನವನ ಅಮಾನುಷ ಕೃತ್ಯ ನಿಲ್ಲುವುದು ಎಂದು? ಎನಿಸಿ ಮನಸ್ಸು ಮರುಗಿತು. ಪಟಾಕಿಯಿಂದ ಸಂಭವಿಸುವ ಅನಾಹುತಗಳ ಅರಿವಿದ್ದರೂ, ಹಿರಿಯರು, ಪ್ರಾಣಿಗಳಿಗೆ ಅದರಿಂದಾಗುವ ಸಂಕಟದ ಬಗ್ಗೆ ಗೊತ್ತಿದ್ದರೂ, ಪರಿಸರಪ್ರಿಯರಿಂದ ಇದರ ನಿಷೇಧದ ಒತ್ತಾಯವಿದ್ದರೂ ಮನರಂಜನೆ ನೆಪವೊಡ್ಡುತ್ತಿರುವುದು ಎಷ್ಟು ಸರಿ? ಇದು ಎಂಥ ಮನರಂಜನೆ?

—ಕೇಶವ ಪ್ರಭು, ಶಿವಮೊಗ್ಗ

### ಭಲೇ ಮುಧೋಳ್!

'ಮುಧೋಳ ಹೌಂಡ್– ರಕ್ಷಣಾ ಪಡೆಗಳ ಮಿಂಚು' (ನ. 13, ಬಸವರಾಜ ಹವಾಲ್ದಾರ) ಲೇಖನ ಮಾಹಿತಿಪೂರ್ಣವಾಗಿದೆ. ಮುಧೋಳ ತಳಿಯ ಈ ನಾಯಿಗಳು ಸೇನಾಪಡೆಯಲ್ಲಿ ಛಾಪು ಮೂಡಿಸುತ್ತಿರುವುದು, ಪತ್ತೇದಾರಿ ಕಾರ್ಯದಲ್ಲಿ ಮುಂಚೂಣಿಯಲ್ಲಿರುವುದು ಅಚ್ಚರಿ ತಂದಿತು.

—ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in